# ಭಕ್ತಿಭಂಡಾರಿಯವರ ಭಂಡಾರದ ಅನರ್ಘ್ಯ ರತ್ನಗಳು

❑ ಸರಸ್ವತಿ ವಿಜಯನಾರಸಿಂಹ

**ಭಕ್ತಿಭಂಡಾರಿ ಬಸವೇಶ್ವರರು ಹುಟ್ಟುಹಾಕಿದ ಧಾರ್ಮಿಕ ಮಹಾಕ್ರಾಂತಿಯಲ್ಲಿ ಅವರ ಅನುಯಾಯಿಗಳಾಗಿ ಮಿಂಚಿದ ಕೆಲವು ಶಿವಶರಣರ ಪರಿಚಯವನ್ನು ಮಾಡಿಕೊಟ್ಟಿರುವ ಶ್ರೀಮತಿ ಸರಸ್ವತಿ ಅವರು ಪ್ರಸಿದ್ಧ ಸಂಗೀತ ವಿದ್ವಾಂಸರಾದ ವಿಜಯನಾರಸಿಂಹ ಅವರ ಧರ್ಮಪತ್ನಿ.**

ಧರ್ಮ ಖಿಲವಾದಾಗಲೆಲ್ಲ ದಿವ್ಯಶಕ್ತಿಯೊಂದು ಆವಿರ್ಭವಿಸಿ ಸಹಮಾನವರನ್ನು ಬೆಳಕಿನೆಡೆಗೆ ಕೊಂಡೊಯ್ಯುತ್ತದೆ, ಸತ್ಯದ ದಾರಿಯಲ್ಲಿ ಮುನ್ನಡೆಸುವ ದಿವ್ಯ ಚೈತನ್ಯವಾಗುತ್ತದೆ. ಹನ್ನೆರಡನೆಯ ಶತಮಾನದಲ್ಲಿ ಮೇಲು-ಕೀಳು ಭಾವನೆಯ ಕಾರ್ಮೋಡ ದಟ್ಟವಾಗಿ ಕವಿದಿತ್ತು. ವೈದಿಕ ಸಂಪ್ರದಾಯದವರು ಮಾನವೀಯತೆಯನ್ನು ಧರ್ಮದ ಸೋಗಿನಲ್ಲಿ ತುಳಿಯಲಾರಂಭಿಸಿದ್ದರು. ಶ್ರೀಮಂತರು ಹಣದ ಮದವೇರಿ ಲೋಲುಪರಾಗಿ ನಡೆಸುತ್ತಿದ್ದ ದುಷ್ಕೃತ್ಯಗಳಿಗೆ ಕೊನೆಯಿರಲಿಲ್ಲ. ವಿದ್ವಾಂಸರು ಸಂಸ್ಕೃತದಲ್ಲಿ ಉದ್ಗ್ರಂಥಗಳನ್ನು ರಚಿಸಿ ಜನಸಾಮಾನ್ಯರಿಗೆ ವಿದ್ಯಾರ್ಜನೆಯ ಅವಕಾಶವೇ ಇಲ್ಲದಂತೆ ಮಾಡಿದ್ದರು. ವಿದ್ಯೆ ಕಲಿಯುವ ಹುಮ್ಮಸ್ಸಿದ್ದರೂ ಯುವಕರು ಕಲಿಯಲಾರದವರಾಗಿದ್ದರು. ಸಮಾಜದ ಅನ್ಯಾಯಗಳಿಗೆ ತಿರುಗೇಟು ಕೊಡಲಾರದೆ ಯೋಗ್ಯ ಮುಂದಾಳೊಬ್ಬನಿಗಾಗಿ ಜನ ಹಾತೊರೆಯುತ್ತಿದ್ದರು.

ಇಂಥ ಸಂದರ್ಭದಲ್ಲಿ ಮೂಡಿಬಂದ ದಿವ್ಯಶಕ್ತಿ ಜಗಜ್ಜ್ಯೋತಿ ಬಸವೇಶ್ವರರು. ತಮ್ಮ ಆಧ್ಯಾತ್ಮಿಕ ಭಾವನೆಯಲ್ಲಿ ಕ್ರಾಂತಿಕಾರಕ ದೃಷ್ಟಿಯನ್ನೂ ಬೆರೆಸಿದರು. ಸಮಾಜವನ್ನು ಸನ್ಮಾರ್ಗದಲ್ಲಿ ನಡೆಸುವ ಹರಿಕಾರರಾದರು. ಭಕ್ತಿಮಾರ್ಗದಲ್ಲಿ ನಡೆದು ಯೋಗ್ಯ ಸತ್ಪ್ರಜೆಗಳಾಗಬಯಸುವವರೆಲ್ಲರೂ ಬಸವಣ್ಣನವರ ಅನುಯಾಯಿಗಳಾದರು, ಐಹಿಕ ಜೀವನವನ್ನು ಸಾರ್ಥಕಪಡಿಸಿಕೊಳ್ಳುವ ಸಾಧಕರಾದರು. ಜಾತಿ, ಮತ, ವಯೋಮಿತಿಯ ಕಟ್ಟುಪಾಡಿಲ್ಲದೆ ಅವರು ಮುನ್ನುಗ್ಗಿ ಬಂದರು. ನೈತಿಕ ಜೀವನದಿಂದ ಸಾಮಾಜಿಕ ಸಮಾನತೆಯನ್ನು ಸಾಧಿಸಬಹುದೆಂಬುದನ್ನು ಬಸವಣ್ಣನವರು ನಿರೂಪಿಸಿದರು. ವ್ಯಕ್ತಿಯ ಯೋಗ್ಯತೆಯನ್ನು ಗುಣದಿಂದ ಮಾತ್ರ ಅಳೆಯಬೇಕು ಹುಟ್ಟಿನಿಂದಲ್ಲ ಎಂದೂ ಸಾರಿದರು.

ಈ ಧಾರ್ಮಿಕ ಮಹಾಕ್ರಾಂತಿಯ ಮಂಥನದ ಹೊಸ ವಿಚಾರಗಳನ್ನು ಅನೇಕರು ಸ್ವಾಗತಿಸಿ ಬಸವತತ್ವದ ಆಶ್ರಯ ಪಡೆದು ಶಿವಶರಣರಾದರು ಮತ್ತು ಸಮಾಜಕ್ಕೆ ಅತ್ಯುತ್ತಮ ವಚನಗಳನ್ನು ನೀಡಿದರು. ಇವರಲ್ಲಿ ಸ್ಪೃಶ್ಯ, ಅಸ್ಪೃಶ್ಯರೆಂಬ ಭೇದವಿರಲಿಲ್ಲ. ಸರಳವಾದ ತಿಳಿಗನ್ನಡದಲ್ಲಿ ಜನಮನದಲ್ಲಿ ಉಳಿಯುವಂಥ ವಚನಗಳು ಈ ಅನುಭಾವಿಗಳಿಂದ ರಚನೆಯಾದುವು. ಇವರಲ್ಲಿ ಹಲವರು ಖ್ಯಾತನಾಮರಾದರೆ ಮತ್ತೆ ಹಲವರು ಎಲೆಮರೆಯ ಕಾಯಿಯಂತೆಯೇ ಉಳಿದರು. ಈ ಕ್ರಾಂತಿಕಾರಿ ಭಕ್ತರಲ್ಲಿ ಅನೇಕ ಸ್ತ್ರೀಯರೂ ಜ್ಞಾನಿಗಳಾಗಿ ಶಿವಶರಣೆಯರಾದರು.

## ಆಯ್ದಕ್ಕಿ ಮಾರಯ್ಯ

ಬಸವಣ್ಣನವರ ವಿಚಾರ ಮಂಥನದಲ್ಲಿ ಮೂಡಿಬಂದ ಶಿವಶರಣ. ಈತ ಕಲ್ಯಾಣದಲ್ಲಿ ಅಕ್ಕಿ ಆಯುವ ಕಾಯಕ ನಡೆಸುತ್ತಿದ್ದ. ಆಯ್ದಕ್ಕಿಯಿಂದ ಶರಣರಿಗೆ ಸಂತರ್ಪಣೆ ನಡೆಸುವ ಬಯಕೆ ಈತನದು. ಶಿವನನ್ನು ಒಲಿಸಿಕೊಳ್ಳಲು ಕರ್ಮಮಾರ್ಗವೇ ಶ್ರೇಷ್ಠವೆಂದು ನಂಬಿ ನಡೆದಿದ್ದ. ಗಂಡನಲ್ಲಿ ಅಪಾರ ಶ್ರದ್ಧೆ ಇಟ್ಟಿದ್ದ ಈತನ ಪತ್ನಿ ಲಕ್ಕಮ್ಮನೂ ಶಿವಶರಣೆ. ಅಕ್ಕಿ ಆಯ್ದು ಜಂಗಮರ ದಾಸೋಹ ನಡೆಸುತ್ತಿದ್ದ ಮಾರಯ್ಯನನ್ನು ಕಂಡ ಬಸವಣ್ಣನವರು ಈತನನ್ನು ದೀನನೆಂದು ಬಗೆದು ನೆರವಿಗೆ ಬಂದರು. ಹೇರಳವಾಗಿ ಅಕ್ಕಿ ಚೆಲ್ಲಿಸಿದರು. ಆ ಅಕ್ಕಿಯನ್ನೆಲ್ಲಾ ಆಯ್ದು ಮನೆಗೆ ತಂದಿದ್ದ ಮಾರಯ್ಯನನ್ನು ಪತ್ನಿ ಲಕ್ಕಮ್ಮ ತಡೆದಳು. ಶಿವಶರಣರಿಗೆ ಇದು ಸಲ್ಲದೆಂದಳು. "ಆಸೆಯೆಂಬುದು ಅರಸಂಗಲ್ಲದೆ ಶಿವಶರಣರಿಗಲ್ಲ"ವೆಂದಳು. "ಈಸಕ್ಕಿಯಾಸೆ ನಮಗೇಕೆ" ಎಂದು ಅಕ್ಕಿಯನ್ನೆಲ್ಲಾ ಹಿಂದಿರುಗಿಸಿ ಬರುವಂತೆ ಪತಿಗೆ ಹೇಳಿದಳು.

ಕಾಯಕದಲ್ಲಿ ನಂಬುಗೆಯಿಟ್ಟವನನ್ನು ದೀನನೆಂದು ತಿಳಿದು ಬಸವಣ್ಣನವರು ಅಭಿಮಾನಕ್ಕೆ ಪೆಟ್ಟುಕೊಟ್ಟಿದ್ದಾರೆಂದು ಮನ ಮಿಡಿದುಕೊಂಡಳು. "ಚಿತ್ತ ಮುಟ್ಟಿ ಸೇವೆ ಮಾಡುವ ಭಕ್ತರಿಗೆ ಮರ್ತ್ಯ, ಕೈಲಾಸವೆಂಬುದಿಲ್ಲ. ಆತನಿದ್ದುದೇ ಸುಕ್ಷೇತ್ರ" ಎಂದು ದೃಢವಾಗಿ ನಂಬಿ ಪತಿಯೊಂದಿಗೆ ಜಂಗಮದಾಸೋಹಕ್ಕೆ ದೃಢಮನಸ್ಕಳಾದಳು. ಆಯ್ದಕ್ಕಿಯಲ್ಲಿ ದಾಸೋಹ ಪ್ರಾರಂಭಿಸಿದರು. ಸತತವಾಗಿ ಏಳು ದಿನಗಳು ವ್ರತಸ್ಥರಾಗಿ ಕಾಯಕ ನಡೆಸುತ್ತಾ ಜಂಗಮ ದಾಸೋಹ ನಡೆಸಿದರು. ಶಿವಶರಣರನ್ನು ಶಿವ ಕೈಬಿಡಲಿಲ್ಲ. ಒಂದು ಲಕ್ಷ ತೊಂಬತ್ತಮೂರು ಸಾವಿರ ಜಂಗಮರು ಯಥೇಚ್ಛವಾಗಿ ಉಂಡುಹೋದರು, ಸಂತೃಪ್ತರಾದರು. ಊರೆಲ್ಲಾ ಇದೇ ಮಾತಾಯಿತು.

ಅವಿರತ ದುಡಿಮೆಯಲ್ಲಿ ಲೀನರಾದ ಮಾರಯ್ಯ ಲಕ್ಕಮ್ಮ ದಂಪತಿಗಳು ದಾಸೋಹಕ್ಕೆ ಬೇಕಾದುದನ್ನೆಲ್ಲಾ ಒದಗಿಸುತ್ತಲೇ ಇದ್ದರು. ಬಸವಣ್ಣನವರಿಗೂ ಈ ಸೋಜಿಗದ ಸಂಗತಿ ತಿಳಿಯಿತು. ಮಾರಯ್ಯನನ್ನು ನೋಡಲು ಓಡೋಡಿ ಬಂದರು. ಶಿವಧ್ಯಾನದಲ್ಲಿ ಮಗ್ನನಾಗಿದ್ದ ಮಾರಯ್ಯನನ್ನು ಕಂಡು ನಿಬ್ಬೆರಗಾದರು. ಆತನನ್ನು ಬಿಗಿದಪ್ಪಿದರು. ಎಚ್ಚರಗೊಂಡು ಮಾರಯ್ಯ ಬಸವಣ್ಣನವರನ್ನು ತನ್ನ ಹಟ್ಟಿಯಲ್ಲಿ ಕಂಡು ಚಕಿತನಾದ. "ಇಂಥ ದಾಸೋಹ ನಾನೆಂದೂ ನೋಡಿಲ್ಲ ಮಾರಯ್ಯ, ನಿನ್ನನ್ನು ದೀನನೆಂದು ಬಗೆದ ನನ್ನನ್ನು ಕ್ಷಮಿಸು" ಎಂದ ಬಸವಣ್ಣನವರ ಮಾತಿಗೆ ಮಾರಯ್ಯ,

"ಜೀಯ, ನಿಮ್ಮಿಂದಲೇ ಈ ದಾಸೋಹ ನಡೆದುದು. ಈ ಪವಾಡ ನಡೆಸಿಕೊಟ್ಟು ನನಗೆ ಶಿವದರುಶನವನ್ನು ಕರುಣಿಸಿಕೊಟ್ಟವರು ನೀವೇ" ಎಂದು ಅಣ್ಣನವರ ಕಾಲಿಗೆರಗಿದರು ದಂಪತಿಗಳು. ಕಾಯಕದಲ್ಲಿ ನಿರತನಾದವ ಗುರುದರುಶನವಾದರೂ ಮರೆಯಬೇಕು, ಲಿಂಗಪೂಜೆಯಾದರೂ ಮರೆಯಬೇಕು ಎಂಬುದನ್ನು ಸಾಕಾರವಾಗಿ ನಿರೂಪಿಸಿದ್ದ ಮಾರಯ್ಯನ ಭಕುತಿ ಈಶನಿಗೆ ಪ್ರಿಯವಾಯಿತೆಂದು ಬಸವಣ್ಣನವರು ಮಿಗಿಲಾದ ಸಂತಸದಿಂದ ಅವರೀರ್ವರನ್ನು ಹರಸಿದರು.

ಮಾರಯ್ಯ ಅಮರೇಶ್ವರ ಲಿಂಗ ಎಂಬ ಅಂಕಿತದಲ್ಲಿ ಹಲವಾರು ವಚನಗಳನ್ನು ರಚಿಸಿದ್ದಾನೆ. ಪತಿಯ ಪಡಿನೆಳಲಾದ ಲಕ್ಕಮ್ಮನೂ ವಚನಕಾರ್ತಿ. ಬನವಾಸಿಯ ಮಧುಕೇಶ್ವರ ಮಂದಿರದ ಶಿಲಾಮಂಟಪದ ಗಗ್ಗರಿ ಕಲ್ಲಿನಲ್ಲಿ ಕೆತ್ತಿದ ವಿಗ್ರಹದಡಿ ಆಯ್ದಕ್ಕಿ ಮಾರಯ್ಯನ ಹೆಸರೂ ಕಂಡುಬರುತ್ತದೆ.

## ಬಿಬ್ಬಿ ಬಾಚಯ್ಯ

ಗುಲಬರ್ಗ ಜಿಲ್ಲೆಯ ಗೊಬ್ಬೂರಿನಲ್ಲಿ ಜನಿಸಿದ ಬಿಬ್ಬಿ ಬಾಚಯ್ಯ ೧೨ನೆಯ ಶತಮಾನದ ಶಿವಶರಣ ಮತ್ತು ವಚನಕಾರ. ಬ್ರಾಹ್ಮಣ ಕುಲದಲ್ಲಿ ಜನಿಸಿದ ಈತ ದೀಕ್ಷೆ ಪಡೆದು ವೀರಶೈವನಾದ. ಶಿವಶರಣರು ಉಂಡು ಉಳಿದದ್ದನ್ನು ಪ್ರಸಾದವೆಂದು ತಂದು ಜಂಗಮರ ದಾಸೋಹ ನಡೆಸುತ್ತಿದ್ದ. ಈ ಪ್ರಸಾದವನ್ನು ಎಂಜಲೆಂದು ಬಗೆದ ಸಂಪ್ರದಾಯವಾದಿ ಬ್ರಾಹ್ಮಣರು ಈತನನ್ನು ಊರ ಒಳಕ್ಕೆ ಸೇರಿಸಕೂಡದೆಂದು ನಿಷೇಧಿಸಿದರು. ಬಾಚಯ್ಯ ಕುಪಿತನಾದ. ಶಿವಶರಣನನ್ನು ನಿಷೇಧಿಸಿದವರನ್ನು ಮುಕ್ಕಣ್ಣನ ಹಣೆಗಣ್ಣು ಸುಟ್ಟು ಬೂದಿ ಮಾಡಲೆಂದೂ ತನ್ನ ಶಿವನಿಗೆ ಇದು ಅಪಮಾನವೆಂದೂ ವ್ಯಗ್ರನಾಗಿ ಶಿವಧ್ಯಾನನಿರತನಾದ. ಊರು ಸುಟ್ಟು ಭಸ್ಮವಾಯಿತು. ಬ್ರಾಹ್ಮಣರೆಲ್ಲ ಶರಣಾಗಿ ತಮ್ಮ ಅಹಂಕಾರಕ್ಕೆ ಕ್ಷಮೆ ಯಾಚಿಸಿದರು. ಶಿವಶರಣರ ಶಕ್ತಿಯ ಮುಂದೆ ತಾವು ಹುಲ್ಲುಕಡ್ಡಿ ಎಂದು ಮನಗಂಡರು. ಶಾಂತನಾದ ಬಾಚಯ್ಯ ಪುರವನ್ನು ರಕ್ಷಿಸಿ ಮೇಲು-ಕೀಳೆಂಬ ಭಾವ ಮನುಷ್ಯರಲ್ಲಿ ಇರಬಾರದೆಂಬುದನ್ನು ಅಂಧನಂಬಿಕೆಯುಳ್ಳವರಿಗೆ ಮನದಟ್ಟು ಮಾಡಿಸಿದ. ಭಕ್ತನಾದವನಿಗೆ ಜಾತಿ ಎಂಬುದಿಲ್ಲ. ವಿಶ್ವವೇ ಅವನ ಮನೆ. ಜೀವರಾಶಿಗಳೆಲ್ಲರೂ ಅವನ ಒಡಹುಟ್ಟಿನವರು ಎಂದು ತಿಳಿಸಿದ.

ಏಣಾಂಕಧರ ಸೋಮೇಶ್ವರಲಿಂಗ ಎಂಬ ಅಂಕಿತದಲ್ಲಿ ಈತ ವಚನಗಳನ್ನು ರಚಿಸಿದ್ದಾನೆ. ಈ ವಚನಗಳಲ್ಲಿ ಉತ್ತಮ ರೀತಿಯ ತತ್ತ್ವನಿರ್ದೇಶನವಿದೆ. ಬಸವಣ್ಣನವರು ಪ್ರಸಾದ ಪ್ರಸಾದಿ ಬಿಬ್ಬಿ ಬಾಚಯ್ಯ ಎಂದು ಹೊಗಳಿದ್ದಾರೆ. ಪಾಲ್ಕುರಿಕೆ ಸೋಮನಾಥನ ತೆಲುಗು ಬಸವಪುರಾಣದಲ್ಲೂ "ಪ್ರಸಾದುಲು ಬಿಬ್ಬಿ ಬಾಚಯ್ಯಗಾರು" ಎಂದು ಈತನ ಬಗ್ಗೆ ಬರೆದಿದ್ದಾರೆ.

## ಬಾಹೂರ ಬೊಮ್ಮಣ್ಣ

ಈತ ಕಲ್ಯಾಣದ ತ್ರಿಪುರಾಂತಕನ ಭಕ್ತ. ಮುದ್ದೇಬಿಹಾಳದ ಬಾಹೂರು ಈತನ ಜನ್ಮಸ್ಥಳ. ತೋಟಗಾರಿಕೆ ಈತನ ಕಾಯಕ. ಬ್ರಹ್ಮೇಶ್ವರ ಎಂಬ ಅಂಕಿತದಲ್ಲಿ ಈತ ವಚನಗಳನ್ನು ರಚಿಸಿದ್ದಾನೆ. ಶಿವನನ್ನು ತೋರಿಸೆಂದು ಈತನಿಗೆ ಪಣ ಒಡ್ಡಿದವರನ್ನು ತನ್ನನ್ನು ಕೆಣಕಬೇಡಿರೆಂದು ಹೇಳಿದ. ಈತನ ಬಾಯಿಮಾತಿಗೆ ಬಗ್ಗದ ಹುಂಬರಿಗೆ ತಿಳವಳಿಕೆ ಬರಿಸಲು ಜೋಳದ ರಾಶಿಯಲ್ಲಿ ಶಿವನನ್ನು "ಓ" ಎನ್ನಿಸಿದ. ಮದವೇರಿ ನಡೆದ ಆನೆಯನ್ನು "ಹೋಸಿತ್" ಎಂದು ತಡೆದು ನಿಲ್ಲಿಸಿದ. ಇದನ್ನು ಮಾಯಾ ಮಂತ್ರವೆಂದು ತೆಗಳಿದವರನ್ನು ತನ್ನ ಭಕ್ತಿಯಲ್ಲಿ ನಂಬಿಕೆ ಬರುವಂತೆ ಮಾಡಿದ. ಮದವೇರಿದ ಆನೆಯನ್ನು ನೂಕಿ ಕೊಂದು ಮತ್ತೆ ಅದಕ್ಕೆ ಜೀವ ಕೊಡುವಂತೆ ಶಿವನನ್ನು ಬೇಡಿ ಆನೆಯನ್ನು ಬದುಕಿಸಿದ. ಕಲ್ಲುಬಸವನಿಗೆ ಜೀವಬರಿಸಿ ಪೇಟೆಯಲ್ಲಿದ್ದ ಅರ್ಧ ಕಬ್ಬನ್ನೆಲ್ಲಾ ಅದಕ್ಕೆ ತಿನ್ನಿಸಿದ. ತ್ರಿಪುರಾಂತಕಕೆರೆಯ ಅರ್ಧ ನೀರನ್ನೆಲ್ಲಾ ಒಂದೇ ಗುಟುಕಿಗೆ ಕುಡಿದ ಬಸವನಿಗೆ ಊರಿನವರೆಲ್ಲಾ ಶರಣೆಂದರು. ಈತನ ಭಕ್ತಿಯನ್ನು ಅಲ್ಲಗಳೆದ ತಮ್ಮ ಮೂರ್ಖತನವನ್ನು ಶಪಿಸಿ, ತಮಗೆ ಒಳಿತು ಉಂಟುಮಾಡುವಂತೆ ಪ್ರಾರ್ಥಿಸಿದರು. ಗಣಸಹಸ್ರನಾಮದಲ್ಲಿ ಈತನ ಹೆಸರಿದೆ. ಈತನ ವಚನಗಳಲ್ಲಿ ಬಸವಣ್ಣ, ಪ್ರಭುದೇವ ಮತ್ತು ನಿಜಗುಣರ ಉಲ್ಲೇಖವಿದೆ.

ಶಿವಶರಣರು ಜೀವತೆಗೆಯುವವರಲ್ಲ, ಜೀವ ನೀಡುವವರು ಎಂಬುದೇ ಇವನ ಪವಾಡಗಳ ಉದ್ದೇಶ. ಇವನ ವಚನಗಳಲ್ಲಿ ಹೆಚ್ಚು ಷಟ್ ಸ್ಥಳದ ಮರ್ಮಗಳ ನಿರೂಪಣೆಯೇ ಪ್ರಧಾನವಾಗಿದೆ. ಈವರೆಗೆ ೫೦ಕ್ಕೂ ಹೆಚ್ಚು ವಚನಗಳು ಈತನವೆಂದು ಸಿಕ್ಕಿವೆ.

## ಬಹುರೂಪಿ ಚೌಡಯ್ಯ

ಈತ ಗಾಯನ, ನರ್ತನ ಮತ್ತು ಜಾದುಗಾರ ಕಲೆಗಳನ್ನು ಕಾಯಕವಾಗಿಸಿಕೊಂಡಿದ್ದ. ಬಹುರೂಪದ ಮೇಳದೊಡನೆ ಊರೂರು ತಿರುಗುತ್ತ ಈತ ಜನರನ್ನು ರಂಜಿಸುತ್ತಿದ್ದ. ತನ್ನ ಈ ಕಾಯಕದ ಹಣವನ್ನು ಶಿವಭಕ್ತರ ದಾಸೋಹಕ್ಕೆ ವಿನಿಯೋಗಿಸುತ್ತಿದ್ದ. ಭರತನಾಟ್ಯದಲ್ಲಿ ಅದ್ವಿತೀಯನಾಗಿದ್ದ. ಈತನ ಹೆಸರನ್ನು ಕೇಳಿ ಇವನೊಂದಿಗೆ ಸ್ಪರ್ಧೆ ಹೂಡಲು ಬಂದವರು ಕೋಟಗಿರಿ ರಾಮದೇವ ಭೂಪಾಲನ ಆಸ್ಥಾನ ಕಲಾವಿದ ಅಚ್ಯುತ ಮತ್ತು ಯಕ್ಷನಾಥ ಎಂಬುವವರು. ಇವರೊಂದಿಗೆ ಸ್ಪರ್ಧೆಗಿಳಿದ ಚೌಡಯ್ಯ. ಈತನ ಅಪ್ರತಿಮ ನಾಟ್ಯಪ್ರದರ್ಶನಕ್ಕೆ ಸ್ಪರ್ಧಿಗಳಿಬ್ಬರೂ ತಬ್ಬಿಬ್ಬಾದರು. ಈತನ ನಾಟ್ಯಕಲೆಗೆ ಕೈಮುಗಿದು ಯಕ್ಷನಾಥ ಮತ್ತು ಅಚ್ಯುತ ಇಬ್ಬರೂ ಚೌಡಯ್ಯನ ಶಿಷ್ಯರಾಗಿ ಈತನ ಮೇಳದಲ್ಲಿ ಸೇರಿಕೊಂಡರು.

ದೊಡ್ಡ ಗಣಪರ್ವ ಮಾಡಿ ದಾಸೋಹ ನಡೆಸಬೇಕೆಂದು ಒಮ್ಮೆ ಈತನಿಗೆ ಇಚ್ಛೆಯಾಯಿತು. ತಾನು ಲಿಂಗಪೂಜೆಯಲ್ಲಿ ಹಾಡುತ್ತಿದ್ದ ತನ್ನ ಪ್ರೀತಿಯ ರಾಗ ರಾಮಕ್ರಿಯಾವನ್ನು ರಾಮದೇವ ಭೂಪಾಲನಲ್ಲಿ ಒತ್ತೆಯಿಟ್ಟು ದಾಸೋಹವನ್ನು ಪೂರೈಸಿದ. ಶಿವಶರಣರ ಚರಿತ್ರೆಗಳನ್ನು ನಾಟ್ಯಕ್ಕೆ ಅಳವಡಿಸಿ ಆಡಿ ಅದರಿಂದ ಪಡೆದ ಹಣವನ್ನು ಸಾಲ ತೀರಿಸಲು ಬಳಸಿದ. ಜಂಗಮರೂಪಿ ಶಿವನಾದ ನಾಗಿನಾಥಾಚಾರ್ಯನ ಅಪೇಕ್ಷೆಯಂತೆ ಮನದಣಿಯೆ ಹಾಡಿ ತೋರಿಸಿದ. ಕಲ್ಯಾಣಕ್ಕೆ ಹೋಗಿ ಬಸವಣ್ಣನವರಾದಿಯಾಗಿ ಎಲ್ಲ

ರನ್ನೂ ಕಂಡು ತಾನು ಅಭಿನಯಿಸುತ್ತಿದ್ದ ಶಿವಶರಣರ ಚರಿತ್ರೆಗಳನ್ನು ಅಭಿನಯಿಸಿ ತೋರಿಸಿ ಎಲ್ಲರನ್ನೂ ಸಂತೋಷಗೊಳಿಸಿದ.

ತನ್ನ ದೀಕ್ಷಾಗುರು ಮೋಕ್ಷಗುರು ಇಬ್ಬರ ಹೆಸರನ್ನೂ ಒಳಗೊಂಡಂತೆ ರೇಕಣ್ಣಪ್ರಿಯ ನಾಗಿನಾಥ ಎಂಬ ಅಂಕಿತದಲ್ಲಿ ಈತ ವಚನಗಳನ್ನು ರಚಿಸಿದ್ದಾನೆ. "ಶಿವಪಾರಿಜಾತ" "ರಾಮಕ್ರಿಯಾರಾಗ" ಎಂಬವು ಈತ ೧೨ನೆಯ ಶತಮಾನಕ್ಕೆ ನೀಡಿದ ಬರಹರೂಪಿ ಕೃತಿಗಳೆಂದೂ ಹೇಳಲಾಗುತ್ತವೆ.

## ಮಾದರ ಚನ್ನಯ್ಯ

ಇವನು ಕುದುರೆ ಲಾಯದಲ್ಲಿ ಕೆಲಸ ಮಾಡುತ್ತಿದ್ದ. ಹುಲ್ಲು ಕೊಯ್ದು ತರುವುದು ಇವನ ಕಾಯಕ. ಬಸವಣ್ಣನವರಿಂದ ಅತ್ಯಂತ ಪ್ರಭಾವಿತನಾಗಿದ್ದ. ೧೨ನೆಯ ಶತಮಾನದ ಮತ್ತೊಬ್ಬ ಭಕ್ತಾಗ್ರೇಸರ. ಹುಲ್ಲುಕೊಯ್ಯಲು ಹೋದಾಗ ಪ್ರಕೃತಿಯ ಮಡಿಲಲ್ಲಿ ಕುಳಿತು ಶಿವನನ್ನು ಏಕಾಂತವಾಗಿ ಧ್ಯಾನಿಸುತ್ತಿದ್ದ. ಮಡದಿ ತರುತ್ತಿದ್ದ ಅಂಬಲಿಯನ್ನು ಶಿವನಿಗರ್ಪಿಸಿ ಸಂತುಷ್ಟನಾಗುತ್ತಿದ್ದ. ನಾನಾ ವೇಷದಲ್ಲಿ ಬಂದು ಶಿವ ಇವನಿತ್ತ ಅಂಬಲಿಯನ್ನು ಸೇವಿಸುತ್ತಿದ್ದ. ತಾನು ಉಪವಾಸವಿದ್ದೇನೆಂಬ ಪರಿವೆ ಇಲ್ಲದೆ ಹಸಿದ ಜೀವಿಗೆ ಅಂಬಲಿಯಿತ್ತ ಸಂತೋಷದಲ್ಲಿ ಆನಂದಪಡುತ್ತಿದ್ದ ಇವನಿಗೆ ಶಿವ ಪ್ರತ್ಯಕ್ಷನಾದ. ಇವನೊಂದಿಗೆ ಅಂಬಲಿಯನ್ನು ಸೇವಿಸಿ ಈ ಮುಗ್ಧ ಭಕ್ತನನ್ನು ಪರಮಾನಂದಪಡಿಸಿದ ಶಿವ. ಕಿವಿಯಿಂದ ಕಿವಿಗೆ ಹಬ್ಬಿದ ಈ ಸೋಜಿಗದ ಸಂಗತಿ ರಾಜನಿಗೂ ತಲುಪಿತು. ಶಿವನನ್ನು ಮೃಷ್ಟಾನ್ನದಿಂದ ಒಲಿಸಿಕೊಳ್ಳಲು ರಾಜ ಪ್ರಯತ್ನಿಸಿದ. ಮಾದರ ಚನ್ನಯ್ಯನ ನಿರ್ವ್ಯಾಜ ಭಕ್ತಿಯ ಮುಂದೆ ಈ ಮೃಷ್ಟಾನ್ನದ ಪೈಪೋಟಿಯ ಭಕ್ತಿಯನ್ನು ತಾನು ಒಲ್ಲೆನೆಂದ ಶಿವ. ರಾಜ ಅಂಥ ಭಕ್ತನನ್ನು ಕಣ್ಣಾರೆ ಕಾಣಲು ಬಂದ. ತನ್ನ ಗುಪ್ತ ಭಕ್ತಿಯನ್ನು ಶಿವ ಪ್ರಕಟಪಡಿಸಿದನೆಂದು ಚನ್ನಯ್ಯ ತುಂಬ ಖಿನ್ನನಾದ. ತನ್ನ ಭಕ್ತಿ ಬಹಿರಂಗವಾಯಿತೆಂದು ತಲೆ ಕತ್ತರಿಸಿಕೊಳ್ಳಲು ಸಿದ್ಧನಾದ. ಆಗ ಪ್ರತ್ಯಕ್ಷನಾದ ಶಿವ ಆತನನ್ನು ಸಮಾಧಾನಪಡಿಸಿದ. ರಾಜ ಚನ್ನಯ್ಯನನ್ನು ಹೊಲಗೇರಿಯಿಂದ ದೊಡ್ಡ ಮೆರವಣಿಗೆಯೊಂದಿಗೆ ಶಿವಾಲಯಕ್ಕೆ ಕರೆತಂದ.

ಬಸವಣ್ಣನವರು ಚನ್ನಯ್ಯನನ್ನು ತುಂಬಾ ಹೊಗಳಿದ್ದಾರೆ. "ಅಪ್ಪನು ನಮ್ಮ ಮಾದರ ಚನ್ನಯ್ಯ" ಎಂದು ಮುಂತಾಗಿ ಹತ್ತು ಹದಿನಾರು ವಚನಗಳಲ್ಲಿ ಆತನನ್ನು ಕೊಂಡಾಡಿದ್ದಾರೆ. ಈತನು ೧೨ನೆಯ ಶತಮಾನದಲ್ಲಿ ಮೂಡಿ ಬಂದ ಮತ್ತೊಬ್ಬ ರತ್ನ. ಈತ ಕಾಂಚಿಪುರದಲ್ಲಿ ಸಮಾಧಿಸ್ಥನಾದನೆಂದು ಹರೀಶ್ವರನ ರಗಳೆಯಿಂದ ತಿಳಿದುಬರುತ್ತದೆ.

## ಮಡಿವಾಳ ಮಾಚಯ್ಯ

ಬಿಜಾಪುರ ಜಿಲ್ಲೆಯ ಹಿಪ್ಪಲಗಿಯಲ್ಲಿ ಈತನ ಜನ್ಮ. ಕಲ್ಲಿನಾಥ ಈತನ ಇಷ್ಟದೈವ. ಪರ್ವತಯ್ಯ ಎಂಬುವವರು ಈತನ ತಂದೆ. ಮಲ್ಲಿಕಾರ್ಜುನ ಮತ್ತು ಲಿಂಗಣಾರ್ಯ ಇವನ ಗುರುಗಳು. ಬಸವಣ್ಣನವರ ಕೀರ್ತಿಯಿಂದ ಆಕರ್ಷಿತನಾಗಿ ಕಲ್ಯಾಣಕ್ಕೆ ಬರಲು ಹಂಬಲಿಸುತ್ತಿದ್ದ ಈತನಿಗೆ ಹಲವಾರು ಆತಂಕಗಳು ಅಡ್ಡಿಯಾಗುತ್ತಿದ್ದುವು. ಭಕ್ತಿಯ ಏಕಾಗ್ರತೆಯಲ್ಲಿ ತುಂಬಿದ ಹೊಳೆ ಭೀಮರತಿಯನ್ನು ಈಜಿ ದಾಟಿ ಕಲ್ಯಾಣಕ್ಕೆ ಬಂದಿದ್ದ. ಶಿವಾನುಭಾವದೊಡನೆ ಶಿವಭಕ್ತರ ಬಟ್ಟೆಗಳನ್ನು ಮಡಿ ಮಾಡುವ ಕಾಯಕ ಕೈಗೊಂಡ. ಸತ್ಯನಿಷ್ಠಕಾಯಕ, ನ್ಯಾಯಪರತೆ, ಸಮರ್ಪಣಾಭಾವ ಇವುಗಳಿಂದ ಶರಣರ ಪ್ರೀತಿಗೆ ಪಾತ್ರನಾದ. ಶರಣನ ಭಕ್ತಿಯ ಮುಂದೆ ಇನ್ನಿಲ್ಲವೆಂಬುದನ್ನು ನಿರೂಪಿಸಿದ. ಶಿವಜ್ಞಾನಿಗಳ ಬಟ್ಟೆ ಮಡಿಮಾಡುವ ಕಾಯಕವನ್ನು ತಲ್ಲೀನತೆಯಿಂದ ಮಾಡುತ್ತಿದ್ದ. ಶರಣರ ಬಟ್ಟೆಗಳನ್ನು ಬೇರೆಯವರು ಮುಟ್ಟದಂತೆ ಕಾಲಿಗೆ ಗಂಟೆಕಟ್ಟಿಕೊಂಡು ಎಚ್ಚರಿಸುತ್ತಿದ್ದ. ಬಸವಣ್ಣನವರು ಇಂಥ ಅದ್ವಿತೀಯ ಭಕ್ತನನ್ನು ತುಂಬಾ ಮೆಚ್ಚಿ ಹೊಗಳಿದ್ದರು.

## ರೆಮ್ಮವ್ವೆ

ಈಕೆ ಏಲೇರಿ ಎಂಬ ಊರಿನವಳು. ಶಿವಶರಣೆ ಮತ್ತು ವಚನಕಾರ್ತಿ. ಪತಿಯ ಮರಣಾನಂತರ ಸಮಾಜಘಾತುಕರಿಂದ ತೊಂದರೆಗೊಳಗಾದ ಈಕೆಗೆ ಬದುಕಿನಲ್ಲಿ ಬೆಳಕು ಕಂಡುದು ಬಸವಣ್ಣನವರ ಭರವಸೆಯಿಂದ. ತನ್ನ ಮಕ್ಕಳೊಂದಿಗೆ ಒಕ್ಕಲುತನ ಕೈಗೊಂಡು ಕಾಯಕವೇ ಕೈಲಾಸ ಎಂಬುದನ್ನು ಪ್ರಮಾಣಿಸತೊಡಗಿದಳು.

ತತ್ತ್ವನಿಷ್ಠಳಾಗಿ ಭಾವಶುದ್ಧಿಯಿಂದ ಒಕ್ಕಲುತನದಲ್ಲೂ ತಲ್ಲೀನಳಾದಳು. ಆಚಾರವೇ ಪ್ರಾಣವಾಗಿ ಭಾವಿಸಿದಳು. ಕಾಯಕದ ಗಳಿಕೆಯಿಂದ ಗುರುಲಿಂಗ ಜಂಗಮರ ಸೇವೆ ನಡೆಸಿದಳು. ಮಹೇಶ್ವರ ಸ್ಥಲದ ನಿಷ್ಠೆ ಈಕೆಯ ವಚನಗಳಲ್ಲಿ ಕಂಡುಬರುತ್ತದೆ. ರಾಮೇಶ್ವರ ಲಿಂಗ ಈಕೆಯ ವಚನಗಳ ಅಂಕಿತ.

## ರೇಚವ್ವೆ

ಬಸವಣ್ಣನವರ ಮಹಾಕ್ರಾಂತಿಯ ಕಾಲದಲ್ಲಿ ಪ್ರಕಟಗೊಂಡ ಮಹಾಪ್ರತಿಭಾನ್ವಿತೆ. ಕಾಳಕೂಟಯ್ಯ ಎಂಬ ಶಿವಶರಣನ ಪತ್ನಿ. ಆದರ್ಶ ಸತೀಮಣಿ. ಶಿವಭಕ್ತಿಯಿಂದ ಜಗತ್ತಿನಲ್ಲಿ ಏನನ್ನು ಬೇಕಾದರೂ ಸಾಧಿಸಬಹುದೆಂಬುದನ್ನು ನಿರೂಪಿಸಿದವಳು. ಪತಿಯು ಕಾಳಿಂಗ ಸರ್ಪ ಕಡಿದು ಮರಣಶಯ್ಯೆಯಲ್ಲಿದ್ದಾಗ ಶಿವನನ್ನು ತದೇಕ ಚಿತ್ತದಿಂದ ಮೂರುದಿನಗಳ ಕಾಲ ಧ್ಯಾನಿಸಿದಳು. ಶಿವನ ಕೊರಳಿನಲ್ಲಿದ್ದ ಕಾಲ ನಾಗ ಬಂದು ವಿಷಹೀರಿ ಈಕೆಯ ಪತಿಯನ್ನುಳಿಸಿತೆಂದು ಉಲ್ಲೇಖವಿದೆ. ಈಕೆ ಶಾಂತೇಶ್ವರ ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿದ್ದಾಳೆ.

ಸೀತೆ ಸಾವಿತ್ರಿಯರು ಪೌರಾಣಿಕ ವ್ಯಕ್ತಿಗಳಾದರು. ಪ್ರತಿ ಪೀಳಿಗೆಗಳಲ್ಲೊಬ್ಬರು ಸೀತೆ ಸಾವಿತ್ರಿಯರ ಆದರ್ಶದಂತೆ ನಡೆದು ಬಂದು ಮಹತ್ತರ ನಿದರ್ಶನಗಳನ್ನು ತೋರಿದ್ದಾರೆ. ೧೨ನೆಯ ಶತಮಾನದಲ್ಲಿ ಲಕ್ಕವ್ವ, ರೆಮ್ಮವ್ವೆ, ರೇಚವ್ವೆಯಂಥವರು ಪ್ರತಿ ಶತಮಾನಕ್ಕೂ ಆದರ್ಶವನ್ನೂ ಪವಿತ್ರ ಜೀವನ ಮತ್ತು ಭಾವಶುದ್ಧಿಗಳ ಪವಾಡವನ್ನೂ ತೋರಿಸಿ ಹಿರಿಮೆಯನ್ನು ಬೆಳಗಿದ್ದಾರೆ. ◆